VK ವಿಜಯ ಕರ್ನಾಟಕ

# ಅಣುಸ್ಥಾವರಗಳಿಂದ ನಷ್ಟವೇ ಹೆಚ್ಚು

ವಿಕ ಸುದ್ದಿಲೋಕ | Jun 26, 2017, 04.00 AM IST



ಯಲ್ಲಾಪುರದಲ್ಲಿ ಭಾನುವಾರ ನಡೆದ ಪರಿಸರ ಸಮಾವೇಶದಲ್ಲಿ ಪರಿಸರ ತಜ್ಞ ಪ್ರೊ.ಬಿ.ಎಂ.ಕುಮಾರ ಸ್ವಾಮಿ...

**ಯಲ್ಲಾಪುರ**: ಕೈಗಾ ಅಣುಸ್ಥಾವರದ ಐದು ಮತ್ತು ಆರನೇ ಘಟಕ ನಿರ್ಮಾಣ ವಿರೋಧಿಸಿ ದಲ್ಲಿ ಭಾನುವಾರ ನಡೆದ ಪರಿಸರ ಸಮಾವೇಶ ಅಭೂತಪೂರ್ವ ಯಶಸ್ಸು ಕಂಡಿತು. ಸ್ವರ್ಣವಲ್ಲೀ ಶ್ರೀಗಳ ನೇತೃತ್ವದಲ್ಲಿ ನಡೆದ ಈ ಸಮಾವೇಶ ಹೋರಾಟದ ದಿಕ್ಸೂಚಿಯನ್ನು ನಿರ್ಣಯಿಸಿತು.

ಸಮಾವೇಶದಲ್ಲಿ ಮಧ್ಯಾಹ್ನ ಕೈಗಾದಲ್ಲಿ ಐದು ಮತ್ತು ಆರನೇ ಘಟಕ ಸ್ಥಾಪನೆ ಯಾಕೆ ಬೇಡ? ಎನ್ನುವ ವಿಷಯ ಕುರಿತು ತಜ್ಞರಿಂದ ಗೋಷ್ಠಿ ಹಾಗೂ ಸಂವಾದ ನಡೆಯಿತು. ಬೆಂಗಳೂರಿನ ಭಾರತೀಯ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ, ಸಮಗ್ರ ವಿಕಾಸ ಅಧ್ಯಕ್ಷ ವೈ.ಬಿ.ರಾಮಕೃಷ್ಣ, ಪರಿಸರ ತಜ್ಞ ಶಿವಮೊಗ್ಗಾದ ಪ್ರೊ.ಬಿ.ಎಂ. ಕುಮಾರ ಸ್ವಾಮಿ, ಬೆಂಗಳೂರಿನ ಡಾ.ವಿಷ್ಣು ಕಾಮತ್ ಮುಂತಾದವರು ಭಾಗವಹಿಸಿ ವಿವಿಧ ವಿಚಾರ ಮಂಡಿಸಿದರು.

ಶಿವಮೊಗ್ಗಾದ ಪರಿಸರ ತಜ್ಞ ಪ್ರೊ.ಬಿ.ಎಂ.ಕುಮಾರ ಸ್ವಾಮಿ ಮಾತನಾಡಿ, ಅಣುಸ್ಥಾವರಗಳಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು. ಪರಮಾಣು ಸ್ಥಾವರ ಯಾವತ್ತೂ ಅಪಾಯಕಾರಿಗಳೇ ಆಗಿವೆ. ಎಷ್ಟೇ ಸುರಕ್ಷ ತಾ ಕ್ರಮ ಕೈಗೊಂಡರೂ ಯಾವಾಗ ಏನು ಸಂಭವಿಸುತ್ತದೆ ಎಂಬುದು ಯಾರಿಗೂ ತಿಳಿಯುವುದಿಲ್ಲ. ಜಗತ್ತಿನ ಅನೇಕ ಮುಂದುವರಿದ ರಾಷ್ಟ್ರಗಳು ಅಣುಸ್ಥಾವರಗಳನ್ನು ಮುಚ್ಚುತ್ತಿವೆ. ಭಾರತದಲ್ಲಿ ಮಾತ್ರ ನೂತನ ಅಣು ಸ್ಥಾವರ ಸ್ಥಾಪಿಸಲಾಗುತ್ತಿದೆ. ಅಣು ವಿದ್ಯುತ್ ಕೂಡಾ ಭಾರಿ ದುಬಾರಿಯಾಗಿದ್ದು,ಅಣು ವಿದ್ಯುತ್ ಉತ್ಪಾದನೆ ನಷ್ಟದಾಯಕ ಎಂಬುದು ಕಂಡುಬಂದಿದೆ ಎಂದರು. ಈಗ ತಂತ್ರಜ್ಞಾನ ಬಹಳ ಮುಂದುವರಿದಿದ್ದು ಸಮುದ್ರದ ನೀರಿನಲ್ಲಿಯೂ ವಿದ್ಯುತ್ ಉತ್ಪಾದನೆ ಮಾಡುವತ್ತ ಲಕ್ಷ ್ಯ ವಹಿಸಬೇಕು. ಇವೆಲ್ಲಕ್ಕಿಂತ ಸೋಲಾರ್ ವಿದ್ಯುತ್, ಪವನ ವಿದ್ಯುತ್ ಉತ್ಪಾದನೆ ಲಾಭದಾಯಕ ಹಾಗೂ ಇದರಿಂದ ಯಾವುದೇ ಅಪಾಯವಿಲ್ಲ. ಅಣು ವಿದ್ಯುತ್ ಘಟಕದ ಅರ್ಧ ಖರ್ಚಿನಲ್ಲಿ ಸೋಲಾರ್ ಘಟಕ ಸ್ಥಾಪಿಸಿ ಬೇಕಾದಷ್ಟು ವಿದ್ಯುತ್ ಪಡೆಯಬಹುದು ಎಂದರು. ವಿಜ್ಞಾನಿ ಡಾ. ಟಿ.ವಿ. ರಾಮಚಂದ್ರ ಮಾತನಾಡಿ, ಅಣುಸ್ಥಾವರದ ಸುತ್ತಲಿನ ಜನರ ಮೇಲೆ ಮಾತ್ರವಲ್ಲ ಪ್ರಾಣಿ,ಪಕ್ಷಿಗಳ, ಮರಗಿಡಗಳ ಮೇಲೂ ಅಣು ವಿಕಿರಣದ ದುಷ್ಪರಿಣಾಮ ಇದೆ. ದುಷ್ಪರಿಣಾಮಗಳ ಮಾಹಿತಿ,ಅಂಕಿ,ಅಂಶಗಳನ್ನು ಸಂಗ್ರಹಿಸಬೇಕು. ಹೊಸ ಅಣು ಘಟಕ ಸ್ಥಾಪನೆ ವಿರೋಧಿಸುವುದು ಮಾತ್ರವಲ್ಲ ಈಗಿರುವ ಅಣುಸ್ಥಾವರವನ್ನೂ ಸ್ಥಗಿತಗೊಳಿಸಬೇಕು,ಇಲ್ಲಿಂದ ತೊಲಗಿಸಬೇಕು ಎಂದರು. ಸಂವಾದದಲ್ಲಿ ಸಂಕಲ್ಪ ಅಧ್ಯಕ್ಷ ಪ್ರಮೋದ್ ಹೆಗಡೆ ಮಾತನಾಡಿ, ಅಣು ವಿದ್ಯುತ್ ಸ್ಥಾವರ ವಿರೋಧಿ ಹೋರಾಟ ದೆಹಲಿ ತಲುಪಬೇಕು ಎಂದರು. ರಾಜೇಶ್ವರಿ ಹೆಗಡೆ, ಸೀತಾ ಹೆಗಡೆ ಮುಂತಾದವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಅನಂತ ಹೆಗಡೆ ಆಶೀಸರ,ರವಿ ಭಟ್ಟ ಬರಗದ್ದೆ ಸಂವಾದ ನಡೆಸಿಕೊಟ್ಟರು.